ದಿನಾಂಕ:-16-04-2022 (ಶನಿವಾರ) ರಂದು ವಾರ್ಡ್ ಸಂಖ್ಯೆ : 132 ಅತ್ತಿಗುಪ್ಪೆ ವಾರ್ಡ್ ಸಮಿತಿ ಸಭೆ ನಡವಳಿಗಳು

*********

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ : 132 ಅತ್ತಿಗುಪ್ಪೆ ವಾರ್ಡ್ ಸಮಿತಿ ಸಭೆಯು ದಿನಾಂಕ:-16-04-2022 ಶನಿವಾರ 10.00 ಗಂಟೆಗೆ ನೋಡೆಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ ಉಪ ವಿಭಾಗದ ಕಛೇರಿಯಲ್ಲಿ ನಡೆದಿರುತ್ತದೆ.

**ಸಭೆಗೆ ಹಾಜರಾಗಿ ಭಾಗವಹಿಸಿದ ಸದಸ್ಯರು ಮತ್ತು ಸಾರ್ವಜನಿಕರ ವಿವರ**

| ಕ್ರ.ಸಂ | ಅಧಿಕಾರಿಗಳು ಮತ್ತು ಸದಸ್ಯರ ಹೆಸರು | ಪದನಾಮ | ಇಲಾಖೆ | ಹಾಜರಾತಿ |
|---|---|---|---|---|
| 1 | ಶ್ರೀ. ರಾಧಕೃಷ್ಣ | ನೋಡಲ್ ಅಧಿಕಾರಿ | ಕಾರ್ಯಪಾಲಕ ಅಭಿಯಂತರರು ಚಾಮರಾಜಪೇಟೆ ವಿಭಾಗ | ಹಾಜರಾಗಿರುತ್ತಾರೆ |
| 2 | ಶ್ರೀಮತಿ. ಜೆ.ಎಸ್. ಚೈತ್ರ | ಕಾರ್ಯದರ್ಶಿ | ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ : 132 ಅತ್ತಿಗುಪ್ಪೆ | ಹಾಜರಾಗಿರುತ್ತಾರೆ |
| 3 | ಶ್ರೀ. ಮಾರುತಿ ಸೇಟ್ | ಸದಸ್ಯರು | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ಸಂಖ್ಯೆ : 132 ಅತ್ತಿಗುಪ್ಪೆ | ಹಾಜರಾಗಿರುತ್ತಾರೆ |
| 4 | ಶ್ರೀ. ಲಕ್ಷ್ಮೀನರಸಿಂಹ | ಸದಸ್ಯರು | ತೋಟಗಾರಿಕೆ ಇಲಾಖೆ | ಹಾಜರಾಗಿರುತ್ತಾರೆ |
| 5 | ಶ್ರೀ. ಸೋಮಣ್ಣ .ಎಸ್. | ಸದಸ್ಯರು | ಸದಸ್ಯರು | ಹಾಜರಾಗಿರುತ್ತಾರೆ |
| 6 | ಶ್ರೀ. ಸಿ. ನಾರಾಯಣ್ | ಸದಸ್ಯರು | ಸಾರ್ವಜನಿಕರು | ಹಾಜರಾಗಿರುತ್ತಾರೆ |
| 7 | ಶ್ರೀ. ಸಂದೀಪ್ ಕುಮಾರ್ | ಸದಸ್ಯರು | ಕಿ.ಆ.ಪರಿವೀಕ್ಷಕರು | ಹಾಜರಾಗಿರುತ್ತಾರೆ |
| 8 | ಶ್ರೀ. ಹನುಮಂತರಾಜು | ಸದಸ್ಯರು | ವೆಟರನರ್ ಇನ್ಸಫೆಕ್ಟರ್ | ಹಾಜರಾಗಿರುತ್ತಾರೆ |
| 9 | ಅನನ್ಯ | ಸದಸ್ಯರು | ಕಿ.ಅ.(ಗುತ್ತಿಗೆ ಆದರದ ಮೇಲೆ) | ಹಾಜರಾಗಿರುತ್ತಾರೆ |
| 10 | ಭಾನುಶ್ರೀ | ಸದಸ್ಯರು | ಕಿ.ಅ.(ಗುತ್ತಿಗೆ ಆದರದ ಮೇಲೆ) | ಹಾಜರಾಗಿರುತ್ತಾರೆ |
| 11 | ಶ್ರೀ. ಶಾಂತಕುಮಾರ್ | ಸದಸ್ಯರು | ಸ್ಯಾನೀಟರಿ ದಫೇದಾರದ | ಹಾಜರಾಗಿರುತ್ತಾರೆ |

ವಾರ್ಡ್ ಕಮಿಟಿ ಸಭೆಯನ್ನು ನಡೆಸುವ ಕುರಿತಾಗಿ ದಿನಾಂಕ:-16-04-2022 ರ ಸಭೆಯ ಸೂಚನಾ ಪತ್ರವನ್ನು ವಾರ್ಡ್ ಸಂಖ್ಯೆ : 132ಕ್ಕೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಗೆ ಕಳುಹಿಸಿಕೊಡಲಾಗಿರುತ್ತದೆ ಹಾಗೂ ವಾರ್ಡ್ ಸಂಖ್ಯೆ : 132 ವಾಟ್ಸ್ ಆಪ್ ಗ್ರೂಪ್‌ಗೆ ಸದರಿ ಸಭೆಯ ಸೂಚನಾ ಪತ್ರವನ್ನು ಹಾಕಲಾಗಿರುತ್ತದೆ.

ಸಭೆಯ ಪ್ರಾರಂಭಿಕ ಹಂತದಲ್ಲಿ ವಾರ್ಡ್ ಕಾರ್ಯದರ್ಶಿ ರವರು ಸಭೆಗೆ ಹಾಜರಿದ್ದ ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರನ್ನು ಸ್ವಾಗತಿಸಿದರು.

ಸಭೆಯಲ್ಲಿ ಸಾರ್ವಜನಿಕ ದೂರುಗಳಿಗೆ ಸಂಬಂಧಿಸಿದಂತೆ ಚರ್ಚಿಸಲಾಯಿತು.

1. **ಆರೋಗ್ಯ ಇಲಾಖೆ** : ಚಂದ್ರ ಲೇಔಟ್ ಕಮ್ಯೂನಿಟಿ ಕ್ಲಿನಿಕ್‌ನಲ್ಲಿ Covid Vaccination ಪ್ರಕ್ರಿಯೆ ಜಾರಿ ಇರುತ್ತದೆ ಅಲ್ಲಿ ಗೇಟು, ನೀರಿನ ಸಮಸ್ಯೆ ಮತ್ತು ಕೆಲವು ಕಿಡಿಗೇಡಿಗಳು ಕುಡಿದು ಹಾಕಿರುವ ಬಾಟಲುಗಳು ಬಿದ್ದಿರುತ್ತವೆ ಎಂದು ಶ್ರೀ. ಮಾರುತಿ ಸೇಠ್ ರವರು ತಿಳಿಸಿರುತ್ತಾರೆ. ಈ ಕುರಿತು ಅಗತ್ಯ ಕ್ರಮವಹಿಸುವಂತೆ ನೋಡೆಲ್ ಅಧಿಕಾರಿಯವರು ಹಿರಿಯ ಆರೋಗ್ಯ ಪರಿವೀಕ್ಷಕರವರಿಗೆ ಸೂಚಿಸಿರುತ್ತಾರೆ.

ಕ್ರಮ : ಆರೋಗ್ಯ ವೈದ್ಯಾಧಿಕಾರಿ ಇಲಾಖೆ

2. **ಘನತ್ಯಾಜ್ಯ ನಿರ್ವಹಣೆ** : ಪೌರ ಕಾರ್ಮಿಕರು ಮತ್ತು ಗ್ಯಾಂಗ್‌ಮೆನ್‌ಗಳಿಗೆ ವೇತನಗಳು ಇಲ್ಲದಿರುವುದಾಗಿ ಸಭೆಯಲ್ಲಿ ತಿಳಿಸಿದರು ಹಾಗೂ ಈಗಾಗಲೆ ಇದರ ಬಗ್ಗೆ ಪತ್ರವನ್ನು ಕಾರ್ಯಪಾಲಕ ಅಭಿಯಂತರವರಿಗೆ ಪತ್ರವನ್ನು ಬರೆಯಲಾಗಿದೆ ಎಂದು ಮತ್ತು ಟಿಪ್ಪರ್ ಗಾಡಿಗಳನ್ನು ನಿಲ್ಲಿಸಲು ಸ್ಥಳಾವಕಾಶವಿಲ್ಲವೆಂದು ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರವರು ತಿಳಿಸಿದರು.

ಕ್ರಮ : ಘನತ್ಯಾಜ್ಯ ನಿರ್ವಹಣೆ ಇಲಾಖೆ

3. **ಬಿಡಬ್ಲ್ಯೂಎಸ್ಎಸ್‌ಬಿ ಇಲಾಖೆ** : ಅತ್ತಿಗುಪ್ಪೆ ಬಸ್ ಸ್ಟಾಪಿನಲ್ಲಿ ನೀರಿನ ಸಮಸ್ಯೆ ಇರುವುದಾಗಿ ಸಾರ್ವಜನಿಕರು ತಿಳಿಸಿರುತ್ತಾರೆ ಎಂದು ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರವರು ತಿಳಿಸಿದರು. ಸದರಿ ಇಲಾಖೆಗಳ ಮೇಲೆ ಜರೂರ ಕ್ರಮವನ್ನು ಜರುಗಿಸುವಂತೆ ನೋಡೆಲ್ ಅಧಿಕಾರಿರವರು ಸೂಚಿಸಿರುತ್ತಾರೆ.

ಕ್ರಮ : ಬಿಡಬ್ಲ್ಯೂಎಸ್ಎಸ್‌ಬಿ ಇಲಾಖೆ

4. **ಕಾಮಗಾರಿ ಇಲಾಖೆ** : ಗಂಗೊಂಡನಹಳ್ಳಿಯ 1 ರಿಂದ 10ನೇ ಅಡ್ಡರಸ್ತೆಯ ವರೆಗೆ ಚರಂಡಿ ಇಲ್ಲದೆ ಮಳೆಯ ನೀರು ಮನೆಗಳಿಗೆ ನುಗ್ಗುತ್ತಿರುವುದಾಗಿ ಸಾರ್ವಜನಿಕರು ತಿಳಿಸಿರುತ್ತಾರೆ ಎಂದು ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರವರು ತಿಳಿಸಿದರು ಮತ್ತು ವಾರ್ಡ್ ಕಛೇರಿ 132 ರಲ್ಲಿ ಇರುವ ಉದ್ಯಾನವನದಲ್ಲಿ ಕೊಳವೆ ಬಾವಿಯನ್ನು ಕೊರೆಯಲು ಶ್ರೀ. ನಾರಾಯಣ್ ರವರು ಕೋರಿದರು ಈ ಕುರಿತು ಅಗತ್ಯ ವಹಿಸಲು ನೋಡೆಲ್ ಅಧಿಕಾರಿರವರು ಸೂಚಿಸಿರುತ್ತಾರೆ.

ಕ್ರಮ : ಕಾಮಗಾರಿ ಇಲಾಖೆ

5. <u>ಪೊಲೀಸ್ ಇಲಾಖೆ</u> : ಚಂದ್ರ ಲೇಔಟ್, ಚಂದ್ರಗಿರಿ ಅಪಾರ್ಟ್‌ಮೆಂಟ್ ಹತ್ತಿರ ರಸ್ತೆಗಳಲ್ಲಿ ವಾಹನಗಳು ಅನಧಿಕೃತವಾಗಿ ನಿಲ್ಲಿಸುತ್ತಿದ್ದು ಇದರ ಬಗ್ಗೆ ಕ್ರಮವಹಿಸಲು ಸದಸ್ಯರು ಕೋರಿರುತ್ತಾರೆ. ಸಭೆಗೆ ಪೊಲೀಸ್ ಇಲಾಖೆಯವರು ಗೈರು ಹಾಜರಾಗಿದ್ದು ಮುಂದಿನ ಸಭೆಯಲ್ಲಿ ಇದರ ಬಗ್ಗೆ ಕ್ರಮವನ್ನು ಕೈಗೊಳ್ಳುವಂತೆ ಹಾಗೂ ಸಭೆಗೆ ಹಾಜರಾಗುವಂತೆ ತಿಳಿಸಲು ನೋಡಲ್ ಅಧಿಕಾರಿಯವರು ಸೂಚಿಸಿರುತ್ತಾರೆ.

ಕ್ರಮ : ಪೊಲೀಸ್ ಇಲಾಖೆ

6. <u>ತೋಟಗಾರಿಕೆ ಇಲಾಖೆ</u> : ಮಳೆಗಾಲದ ಪ್ರಾರಂಭವಾಗಿದ್ದು ಗಾಳಿಗೆ ಮರದ ರೆಂಬೆಗಳು ರಸ್ತೆಗಳಲ್ಲಿ ಬಿದ್ದಿರುವುದಲ್ಲದೆ ತೋಟಗಾರಿಕೆ ಇಲಾಖೆಯವರು ಮರಗಳನ್ನು ಕಡಿದು ರಸ್ತೆಗಳಲ್ಲಿ ಬಿಟ್ಟಿರುವುದಾಗಿ ಶ್ರೀ. ನಾರಾಯಣ್ ರವರು ತಿಳಿಸಿದರು. ಕೂಡಲೇ ಅಗತ್ಯ ಕ್ರಮವಹಿಸಲು ಸಭೆಯಲ್ಲಿ ಹಾಜರಿದ್ದ ಶ್ರೀ. ಲಕ್ಷ್ಮೀನರಸಿಂಹ ರವರಿಗೆ ನೋಡಲ್ ಅಧಿಕಾರಿಯವರು ಸೂಚಿಸಿರುತ್ತಾರೆ.

ಕ್ರಮ : ತೋಟಗಾರಿಕೆ ಇಲಾಖೆ

ಸಭೆಗೆ ಗೈರು ಹಾಜರಾಗಿರುವ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ಮುಂದಿನ ಸಭೆಗೆ ಸಾರ್ವಜನಿಕ ಹಿತದೃಷ್ಟಿಯಿಂದ ಕಡ್ಡಾಯ ಹಾಜರಾಗುವಂತೆ ಸಭೆಯು ತೀರ್ಮಾನಿಸಿರುತ್ತದೆ. ಗೈರು ಅಧಿಕಾರಿಗಳಿಗೆ ಸಂಬಂಧಿಸಿದಂತೆ ಅವರ ಇಲಾಖೆಗಳ ಮೇಲಾಧಿಕಾರಿಗಳಿಗೆ ವರದಿ ಮಾಡಲಾಗುವುದೆಂದು ನೊಡಲ್ ಅಧಿಕಾರಿಯವರು ಸೂಚಿಸಿರುತ್ತಾರೆ.

ಅಂತಿಮವಾಗಿ ನೋಡಲ್ ಅಧಿಕಾರಿಯವರು ವಾರ್ಡ್ ಸಮಿತಿ ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ ಸ್ಪಂದಿಸಿ ಪರಿಹರಿಸಲು ಕ್ರಮತೆಗೆದುಕೊಂಡು ಸಂಬಂಧಪಟ್ಟ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿರುತ್ತಾರೆ.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ನೋಡಲ್ ಅಧಿಕಾರಿರವರ ಆದೇಶದ ಮೇರೆಗೆ**

**ಕಾರ್ಯದರ್ಶಿ**

**ವಾರ್ಡ್ ಸಂಖ್ಯೆ : 132 ಅತ್ತಿಗುಪ್ಪೆ**

<u>ಪ್ರತಿಯನ್ನು:-</u>

1. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
2. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
3. ಕಾರ್ಯಪಾಲಕ ಅಭಿಯಂತರರು, ವಿಜಯನಗರ ವಿಭಾಗ ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
4. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ ಉಪ ವಿಭಾಗ ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
5. ಕಛೇರಿ ಕಡತಕ್ಕಾಗಿ.